ಕರ್ನಾಟಕ ಸರ್ಕಾರ

**ಸಾಕ್ಷಿದಾರರ ಹೇಳಿಕೆ (ಆರ್.ಪಿ.ನಂ. 57) ಫಾರ್ಮ ನಂ. 4 (ಸಿವಿಲ್)**

**ಸಿವಿಲ್ ನ್ಯಾಯಾಧೀಶರು ಹಾಗೂ ಜೆ.ಎಮ್.ಎಫ್.ಸಿ ರವರ ನ್ಯಾಯಾಲಯ, ದಾಂಡೇಲಿ**

ಸಿಸಿ ನಂ ಃ 182-10

ಚಾ.ಸಾ. ಃ 2 ಪ್ರಾ.ಸಾ. ಃ 1

ಸಾಕ್ಷಿಯ ಹೆಸರು ಃ ಸೌಂದರರಾಜ

ತಂದೆಯ ಃ ಗಂಡನ ಹೆಸರು ಃ ಚಂದ್ರಮೋಹನ

ವಯಸ್ಸು ಃ ೩೪

ಉದ್ಯೋಗ ಃ ಕೆಲಸ ಇಲ್ಲ

ವಾಸ ಃ ಬೆಂಗಳೂರು

ಸಾಕ್ಷಿಗೆ ಪ್ರಮಾಣೀಕರಿಸಲಾಯಿತು. **08/11/2013**

ಎಪಿಪಿ ಯವರಿಂದ ಮುಖ್ಯ ವಿಚಾರಣೆ ಃ

ಆರೋಪಿಯನ್ನು ನಾನು ನೋಡಿದ್ದೇನೆ. ಸ್ಥಳ ಮಹಜರು, ಸ್ಥಳ ನಕ್ಷೆ , ಜಪ್ತು ಪಂಚನಾಮೆ ಮತ್ತು ಇನ್ನೊಂದು ಸ್ಥಳ ನಕ್ಷೆಯಲ್ಲಿರುವ ತನ್ನ ಸಹಿಗಳನ್ನು ಸಾಕ್ಷಿ ನೋಡಿ ಗುರುತಿಸಿದ್ದು , ಸ್ಥಳ ಮಹಜರನ್ನು ನಿಪಿ ೧ ಎಂದು , ಸ್ಥಳ ನಕಾಶೆಯನ್ನು ನಿಪಿ ೨ ಎಂದು , ಜಪ್ತು ಪಂಚನಾಮೆಯನ್ನು ನಿಪಿ ೩ ಎಂದು ಹಾಗೂ ಇನ್ನೊಂದು ಸ್ಥಳ ನಕ್ಷೆಯನ್ನು ನಿಪಿ ೪ ಎಂದು ಅವುಗಳಲ್ಲಿರುವ ಸಾಕ್ಷಿಯ ಸಹಿಗಳನ್ನು ಕ್ರಮವಾಗಿ ನಿಪಿ ೧(ಎ) ಯಿಂದ ನಿಪಿ ೪(ಎ) ಎಂದು ಗುರುತಿಸಲಾಯಿತು. ನಿಪಿ ೧ ಮತ್ತು ೨ ಕ್ಕೆ 2009 ನೇ ಇಸ್ವಿಯ ಡಿಸೆಂಬರ ತಿಂಗಳಿನಲ್ಲಿ ಒಂದು ದಿನ ರಾಮನಗರದ ಸೀತಾವಾಡಾದ ಚಾ.ಸಾ ೧೮ ರವರ ಜಾಗದಲ್ಲಿ ಲಾರಿ ಸಂಖ್ಯೆ ಟಿಎನ್ ೪೮ - ಪಿ ೦೫೯ ಕಳ್ಳತನವಾದ ವಿಚಾರವಾಗಿ ಪೋಲಿಸರು ಬಂದು ಮಹಜರು ಮಾಡಿದಾಗ ಮೂಡಿರುತ್ತೇನೆ. ನಿಪಿ ೧ ಮತ್ತು ೨ ನ್ನು ಮಾಡಿದಾಗ ಚಾ.ಸಾ ೩ ರವರು ಹಾಜರ ಇದ್ದರು. ನಿಪಿ ೧ ರಲ್ಲಿ ಬರೆದ ವಿಚಾರ ನನಗೆ ಗೊತ್ತು.

ನಿಪಿ ೩ ಮತ್ತು ೪ ಕ್ಕೆ ದಿನಾಂಕ ೨೧-೧೨-೨೦೦೯ ರಂದು ನ್ಯಾಯಾಲಯದ ಮುಂದಿರುವ ಆರೋಪಿಯು ಪೊಲಿಸರೊಂದಿಗೆ ತಾನು ಲಾರಿಯನ್ನು ಕಳ್ಳತನ ಮಾಡಿ ಬಚ್ಚಿಟ್ಟಿದ್ದ

ಸ್ಥಳವಾದ ರಾಮನಗರದಿಂದ ಖಾನಾಪುರಕ್ಕೆ ಹೋಗುವ ರಸ್ತೆಯಲ್ಲಿ ಬರುವ ಅರಣ್ಯ ಚೆಕ್‌ಪೋಸ್ಟ ಒಳಗೆ ಅರ್ದ ಕಿಮೀ ದೂರದ ಸ್ಥಳವನ್ನು ತೋರಿಸಿದ ಜಾಗದಲ್ಲಿ ಸಹಿ ಮಾಡಿರುತ್ತೇನೆ. ಸದರಿ ಸ್ಥಳದಲ್ಲಿ ಮೇಲೆ ಹೇಳಿದ ಲಾರಿ ಇತ್ತು. ಸದರಿ ಸ್ಥಳದಿಂದ ಸುಮಾರು ಎರಡು ಮೂರು ಅಡಿ ದೂರದಲ್ಲಿ ಒಂದು ಲಾರಿಯ ಚಕ್ರವನ್ನು ಬಚ್ಚಿಟ್ಟಿದ್ದನ್ನು ಆರೋಪಿಯು ತೋರಿಸಿದರು. ನಿಪಿ ೩ ನ್ನು ಮಾಡಿದಾಗ ಇನ್ನೊಬ್ಬರು ಇದ್ದರು. ನಿಪಿ ೩ ನ್ನು ಮಾಡಿ ಪೋಲಿಸರು ಸದರಿ ಲಾರಿ ಮತ್ತು ಮೇಲೆ ಹೇಳಿದ ಚಕ್ರವನ್ನು ಜಪ್ತಪಡಿಸಿಕೊಂಡರು. ಸದರಿ ಲಾರಿ ಮತ್ತು ಚಕ್ರವನ್ನು ನೋಡಿದರೆ ಗುರುತಿಸುತ್ತೇನೆ. ನ್ಯಾಯಾಲಯದ ಮುಂದಿರುವ ಸದರಿ ಚಕ್ರವನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅದನ್ನು ಮು ಮಾ ೧ ಎಂದು ಗುರುತಿಸಲಾಯಿತು.

ಪಾಟೀ ಸವಾಲು ः ಆರೋಪಿವಕೀಲರು ಗೈರು ಹಾಜರಾಗಿರುವುದರಿಂದ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.

( ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚಿಸಲಾಯಿತು)

ಓ ಹೇ ಕೇ ಸರಿ ಇದೆ

ಪ್ರ ದ ನ್ಯಾ ದಂ, ದಾಂಡೇಲಿ

ದಿನಾಂಕಃ ೧೯-೦೮-೨೦೧೫ ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

<u>ಪಾಟೀ ಸವಾಲು</u> ಃ ಆರೋಪಿ ಪರ ವಕೀಲರಿಂದ

ಚಾ.ಸಾ.೧ ರವರು ನನಗೆ ಪರಿಚಯ ಎಂದರೆ ಸರಿ. ನಾನು ಅವರ ಸಂಸ್ಥೆಯಲ್ಲಿ ಮ್ಯಾನೇಜರಾಗಿ ಕೆಲಸ ಮಾಡುತ್ತಿದ್ದೇನೆ. ಚಾ.ಸಾ. ೧೨ ರವರ ಸಹ ನನಗೆ ಪರಿಚಯ ಎಂದರೆ ಸರಿ. ಅವರು ವರಾಹ ಕನ್ಸಟ್ರಕ್ಷನ್ ಎಂಬ ಕಂಪನಿಯ ಮಾಲೀಕರು ಎಂದರೆ ಸರಿ. ಚಾ.ಸಾ.ಸಾ. ೫ ರಿಂದ ೧೪ ರವರು ವರಾಹ ಕನ್ಸಟ್ರಕ್ಷನ್ ಎಂಬ ಸಂಸ್ಥೆ ಬರುವ ಟಿಪ್ಪರ್ ವಾಹನಗಳ ಚಾಲಕರು ಎಂದರೆ ಸರಿ. ಚಾ.ಸಾ. ೧೬ ರವರು ವರಹಾ ಕನಸ್ಟ್ರಕ್ಷನನ ಮಾಲೀಕರು. ಚಾ.ಸಾ.ಸಾ. ೧ ರವರು ವರಾಹ ಕನ್ಸಟ್ರಕ್ಷನ್‌ನಲ್ಲಿ ಕಿರಿಯ ಮ್ಯಾನೇಜರ ಎಂದರೆ ಸರಿ. ನಾನು ಸೀತವಾಡ ಗ್ರಾಮದ ಸರ್ವೆ ನಂ. ೧೨-೭ ಅಥವಾ ೧೩-೭ ರಲ್ಲಿ ನಿಪಿ ೧ ರಲ್ಲಿ ಸಹಿ ಮಾಡಿರುತ್ತೇನೆ. ಸದರಿ ಪ್ಲಾಟ್‌ನ ವಿಸ್ತೀರ್ಣ ಒಂದುವರೆ ಎಕರೆ ಇರಬಹುದು. ಪೂರ್ವ ಪಶ್ಚಿಮ ಹಾಗೂ ಉತ್ತರ ದಕ್ಷಿಣಕ್ಕೆ ಅದರ ಅಳತೆ ನನಗೆ ಗೊತ್ತಿಲ್ಲ, ನಿಪಿ ೧ ಮತ್ತು ೨ ರಲ್ಲಿ ನಾನು ಒಂದೇ ದಿನ ಸಹಿ ಮಾಡಿರುತ್ತೇನೆ. ಆ ರೀತಿ ಸಹಿ ಮಾಡಿದ ದಿನಾಂಕಃ ೨೧-೧೨-೨೦೦೯. ಆ ದಿನ ನಾನು ಒಟ್ಟು ಎಷ್ಟು ಸಹಿಗಳನ್ನು ಮಾಡಿದ್ದೇನು ಎಂದು ನನಗೆ ನೆನಪಿಲ್ಲ, ಸದರಿ ಸಹಿ ಮಾಡಲು ನನ್ನನ್ನು ಪೋಲಿಸರು ಕರೆಸಿದ್ದರು. ನನ್ನನ್ನು ಇನ್ಸಪೆಕ್ಟರ್ ಬಾಬು ಎಂಬುವವರು ಕರೆಯಲು ಬಂದಿದ್ದರು. ಆಗ ನಾನು ಪ್ಲಾಟ್ ನಂ. ೧೩ ರಲ್ಲಿ ಇದ್ದೆನು. ನಿಪಿ ೧ ಮತ್ತು ೨ ರಲ್ಲಿ ನಾನು ಸಹಿ ಮಾಡಿದಾಗ ಸಂಜೆ ೪-೦೦ ಗಂಟೆ ಸಮಯವಾಗಿತ್ತು, ನಿಪಿ ೧ ಮತ್ತು ೨ ರನ್ನು ಇನ್ಸಪೆಕ್ಟರ್ ಹೇಳಿ ಬರೆಸಿರುತ್ತಾರೆ. ಅದನ್ನು ಯಾರು ಬರೆದರು ಎಂದು ನನಗೆ ಹೇಳಲಾಗುವುದಿಲ್ಲ, ಸದರಿ ದಾಖಲೆಗಳಿಗೆ ೨-೩ ಜನ ಟಿಪ್ಪರ್ ಚಾಲಕರು ಸಹಿ

ಮಾಡಿರುತ್ತಾರೆ. ಅವರನ್ನು ಹೊರತುಪಡಿಸಿ ಸದರಿ ದಾಖಲೆಗಳಿಗೆ ಬೇರೆ ಯಾರು ಸಹಿ ಮಾಡಿದ್ದಾರೆ ಎಂದು ನನಗೆ ಹೇಳಲಾಗುವುದಿಲ್ಲ.

ನಾನು ಸಹಿ ಮಾಡಿದ ನಿ.ಪಿ ೧ ಮತ್ತು ೨ ರ ಪಂಚನಾಮೆಗಳ ಸ್ಥಳದ ಚೆಕಬಂದಿ ಸುತ್ತಲೂ ಅರಣ್ಯ ಪ್ರದೇಶವಿದೆ. ಸದರಿ ಸ್ಥಳ ರಾಮನಗರದಿಂದ ೧೫ ಕಿ.ಮೀ ದೂರವಿದೆ. ಸದರಿ ಅರಣ್ಯ ಪ್ರದೇಶದ ಹೆಸರನ್ನು ನನಗೆ ನಿಖರವಾಗಿ ಹೇಳಲು ಬರುವುದಿಲ್ಲ. ಸದರಿ ಸ್ಥಳಕ್ಕೆ ನಾವು ಪೋಲಿಸ್ ಜೀಪಿನಲ್ಲಿ ಹೋಗಿದ್ದೆವು. ಸದರಿ ಜೀಪ್ ಸಂಖ್ಯೆ ನನಗೆ ಹೇಳಲಾಗುವುದಿಲ್ಲ. ಸದರಿ ಜೀಪನಲ್ಲಿ ನಾನು, ಪೋಲಿಸರು, ೨-೩ ಜನ ಟಿಪ್ಪರ್ ಡ್ರೈವರುಗಳು ಹೋಗಿದ್ದೇವು. ಟಿಪ್ಪರ್ ಡ್ರೈವರ್‌ಗಳ ಪೈಕಿ ಒಬ್ಬನ ಹೆಸರು ಬಾದಷಹಾ ಹಾಗೂ ಉಳಿದವರ ಹೆಸರು ನನಗೆ ಗೊತ್ತಿಲ್ಲ. ನಮ್ಮ ಜೊತೆ ಬಂದಿದ್ದ ಪೋಲಿಸರ ಹೆಸರುಗಳನ್ನು ನನಗೆ ಹೇಳಲಾಗುವುದಿಲ್ಲ. ಅಲ್ಲಿ ನಿಂತಿದ್ದ ಲಾರಿ ಯಾವ ದಿಕ್ಕಿಗೆ ಮುಖ ಮಾಡಿ ನಿಂತಿತ್ತು ಎಂದು ನನಗೆ ಈಗ ಹೇಳಲಾಗುವುದಿಲ್ಲ. ಸದರಿ ಲಾರಿಯಲ್ಲಿ ಏನೆಲ್ಲಾ ಬರವಣಿಗೆ ಇತ್ತು ಎಂದು ನನಗೆ ನೆನಪಿಲ್ಲ. ಅಲ್ಲೀ ಇದ್ದ ಟಾಯರ್‌ಗಳಲ್ಲಿ ಯಾವ ಸಂಖ್ಯೆ ಇತ್ತು ಎಂದು ನನಗೆ ಹೇಳಲಾಗುವುದಿಲ್ಲ. ಸದರಿ ಟಾಯರ್‌ಗಳು ಲಾರಿಯ ಬಲಭಾಗದಲ್ಲಿ ಇತ್ತು, ಅದು ಲಾರಿಯಿಂದ ಸುಮಾರು ೩ ಮೀಟರ್ ದೂರದಲ್ಲಿತ್ತು. ಆ ಟಾಯರ್‌ಗಳು ಯಾವ ಕಂಪನಿಗೆ ಸೇರಿದ್ದು ಎಂದು ನನಗೆ ನಿಖರವಾಗಿ ಹೇಳಲಾಗುವುದಿಲ್ಲ. ಟಾಯರ್ ಹಾಗೂ ಲಾರಿ ಇದ್ದ ಸ್ಥಳದ ಸುತ್ತಮುತ್ತ ಗಿಡಮರಗಳು ಇದ್ದವು.

ನನ್ನ ಮುಂದೆ ಪೋಲಿಸರು ನಿಪಿ ೧ ಮತ್ತು ೨ ರಂತೆ ಯಾವುದೇ ಪಂಚನಾಮೆ ಮಾಡಿಲ್ಲ ಎಂದರೆ ಸರಿಯಲ್ಲ. ನಾನು ಸದರಿ ಸಹಿಗಳನ್ನು ಪೋಲಿಸ್ ಠಾಣೆಯಲ್ಲಿ ಮಾಡಿದ್ದರೂ ಸಹ ಸ್ಥಳದಲ್ಲಿ ಮಾಡಿದ್ದೇನೆ ಎಂದು ನಾನು ಕೆಲಸ ಮಾಡುವ ಕಂಪನಿಯವರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ನಿಪಿ ೪ ನ್ನು ವಾಹನ ಸಿಕ್ಕಿದ ಸ್ಥಳದಲ್ಲಿ ಮಾಡಿದ್ದಾರೆ. ಅದನ್ನು ಪೋಲಿಸರು ತಯಾರಿಸಿದ್ದಾರೆ. ಅದನ್ನು ತಯಾರಿಸಲು ಇನ್ಸಪೆಕ್ಟರವರು ಹೇಳಿದರು. ಅದರಲ್ಲಿ ಯಾರ ಯಾರ ಸಹಿ ಇದೆ ಎಂದು ನನಗೆ ಹೇಳಲಾಗುವುದಿಲ್ಲ. ನಿಪಿ ೨ ರ ನಕ್ಷೆಯನ್ನು ಸೀತವಾಡ ಗ್ರಾಮದಲ್ಲಿ ಡಾಂಬರ್ ಪ್ಲಾಂಟೇಶನ್ ನಂ. ೧೩ ರಲ್ಲಿ ಕಳುವಾದ ಸ್ಥಳದಲ್ಲಿ ಮಾಡಿರುತ್ತಾರೆ. ಅದನ್ನು ದಿನಾಂಕಃ ೧೪-೧೨-೨೦೦೯ ರಂದು ಮಾಡಿದ್ದಾರೆ. ಅದರಲ್ಲಿ ಯಾರ ಯಾರ ಸಹಿ ಇದೆ ಎಂದು ನನಗೆ ಹೇಳಲಾಗುವುದಿಲ್ಲ. ನಾನು ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿರುವ ಸಾಕ್ಷ್ಯ ನಾನು ಕೆಲಸ ಮಾಡುತ್ತಿರುವ ಕಂಪನಿಗೆ ಸಹಾಯ ಮಾಡಲು ಸುಳ್ಳು ಹೇಳಿದ್ದೇನೆ ಎಂದರೆ ಸರಿಯಲ್ಲ. ಅದಕ್ಕೆ ತಕ್ಕಂತೆ ನಾನು ಈದಿನ ಸುಳ್ಳು ಸಾಕ್ಷ್ಯವನ್ನು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಆರೋಪಿಯನ್ನು ಪ್ರಥಮ ಬಾರಿಗೆ ೨೧-೧೨-೨೦೦೯ ರಂದು ವಾಹನ ಸಿಕ್ಕಿದ ಜಾಗದಲ್ಲಿ ನೋಡಿದ್ದೇನೆ. ಆ ರೀತಿ ನಾನು ಕೆಲಸ ಮಾಡುತ್ತಿರುವ ಕಂಪನಿಗೆ ಸಹಾಯ ಮಾಡಲು ಸುಳ್ಳು ಹೇಳಿದ್ದೇನೆ ಎಂದರೆ ಸರಿಯಲ್ಲ. ನಾನು ಆ ದಿನ ಆರೋಪಿಯನ್ನು ನೋಡಿಲ್ಲ ಎಂದರೆ ಸರಿಯಲ್ಲ. ಅಲ್ಲಿ ಒಂದು ಚಕ್ರ ಇತ್ತು.

ಮರು ವಿಚಾರಣೆಃ ಇಲ್ಲ

( ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚಿಸಲಾಯಿತು)

ಓ ಹೇ ಕೇ ಸರಿ ಇದೆ

ಪ್ರ ದ ನ್ಯಾ ದಂ, ದಾಂಡೇಲಿ